ಆಶ್ವಾಸನೆಯನ್ನು ಕೊಟ್ಟಿದ್ದರು. ದಿವಂಗತ ದೇವರಾಜ್ ಅರಸುರವರ ಪ್ರತಿಭೆಯನ್ನು ಇಲ್ಲಿ ವಿಧಾನ ಸೌಧದ ಮುಂದುಗಡೆ ಅನಾವರಣ ಮಾಡುತ್ತೇವೆಂದು ಹೇಳಿದರು. ಅದರೂ ಕೂಡ ಇವತ್ತಿನವರೆಗೂ ಪರಾಮರ್ಶೆಯಲ್ಲಿಲ್ಲ. ಸುಮಾರು 10 ವರ್ಷಗಳಿಂದಲೂ ನೆರವೇರಲಿಲ್ಲ. ದಿವಂಗತ ಬಸವಲಿಂಗಪ್ಪನವರ ವಿಚಾರ ಸರ್ಕಾರದ ಕಾರ್ಯಕ್ರಮದಲ್ಲಿ ನಡೆಯಬೇಕು ಎಂದು ನಾವೆಲ್ಲರೂ ಕೂಡ ಅಂದುಕೊಂಡಿದ್ದೇವೆ, ಆದರೆ ಅದು ಕಾರ್ಯಗತ ಆಗುತ್ತದೆಯೇ ಎನ್ನುವುದು ಒಂದು ಪ್ರಶ್ನೆ. ಆದ್ದರಿಂದ ದಯಮಾಡಿ ಈ ಸದನದಲ್ಲಿ ಏನು ಆಶ್ವಾಸನೆಯನ್ನು ಕೊಡುತ್ತಾರೋ ಆ ಆಶ್ವಾಸನೆಗೆ ತಕ್ಕಹಾಗೆ ಕಾರ್ಯಕ್ರಮ ರೂಪಿಸತಕ್ಕ ಪದ್ಧತಿ ಜಾರಿಗೆ ಬರಲಿ ಎಂದು ಒತ್ತಾಯಿಸಿ, ನಮ್ಮ ದಿವಂಗತ ಬಸವಲಿಂಗಪ್ಪನವರು ಬೆರನಿದ್ದೆಯಲ್ಲಿರತಕ್ಕ ಈ ಸಂದರ್ಭದಲ್ಲಿ ನಾವೆಲ್ಲರೂ ಕೂಡ ಅವರ ಆತ್ಮಕ್ಕೆ ಶಾಂತಿಯನ್ನು ಕೋರಿ ಅವರ ಕುಟುಂಬವರ್ಗದವರಿಗೆ ಅವರ ಅಗಲಿಕೆಯನ್ನು ಸಹಿಸುವ ಶಕ್ತಿಯನ್ನು ಭಗವಂತನು ಕೊಡಲೆಂದು ನಾನು ಹಾರೈಸಿ ತಾವು ಮಂಡಿಸಿರತಕ್ಕ ಸಂತಾಪ ಸೂಚನ ನಿರ್ಣಯಕ್ಕೆ ನಾನು ಏನು ಸಹ ಮತವನ್ನು ವ್ಯಕ್ತಿಮಾಡಿ ನನ್ನ ಭಾಷಣವನ್ನು ಮುಗಿಸುತ್ತೇನೆ.

ಉಪಾಧ್ಯಕ್ಷರು:– ಮಾನ್ಯ ಬಸವಲಿಂಗಪ್ಪನವರಲ್ಲದೆ, ಭಾರತದ ಮಾಜಿ ಉಪ ರಾಷ್ಟ್ರಪತಿ ಡಾ; ಹಿದಾಯತುಲ್ಲಾ, ಪ್ರಸ್ತುತ ವಿಧಾನ ಪರಿಷತ್ತಿನ ಸದಸ್ಯರಾಗಿದ್ದ ಶ್ರೀ ಎಂ. ವಿವೇಕಾನಂದಯ್ಯ, ಮಾಜಿ ಶಾಸಕರುಗಳಾದ ಶ್ರೀಯುತರುಗಳಾದ ಡಿ.ಎಂ. ಸಿದ್ದಯ್ಯ, ಕೆ.ಪಿ. ರೇವಣ್ಣ ಸಿದ್ದಯ್ಯ, ವಿ.ಎಸ್. ಲಕ್ಷ್ಮಿಕಾಂತಪ್ಪ, ಡಾ; ಬಿ ಬಾಲಕೃಷ್ಣ ಶೆಟ್ಟಿ ಸಿ.ಎಂ. ಆರ್ಯುಗೌ, ಡಿ.ಆರ್. ಕರೀಗೌಡ, ಸುವಿಖ್ಯಾತ ಗಾಯಕರೂ, ವಿಧಾನ ಪರಿಷತ್ತಿನ ಸದಸ್ಯರೂ ಆಗಿದ್ದ ಶ್ರೀ ಮಲ್ಲಿಕಾರ್ಜುನ ಮನ್ಸೂರ್, ಕರ್ನಾಟಕ ಸಂಗೀತ ಕ್ಷೇತ್ರದ ಹಿರಿಯ ವಿದ್ವಾಂಸ ಶ್ರೀ ಮಹಾರಾಜಪುರಂ ಸಂತಾನಂ, ಸ್ವಾತಂತ್ರ್ಯ ಹೋರಾಟಗಾರರಾದ ಶ್ರೀ ಅಚ್ಯುತ ಪಟವರ್ಧನ್, ಶ್ರೀ ಕೆ.ಎಸ್. ಪಾಟೀಲ್, ಪ್ರೊ ಎಂ. ಗೋಪಾಲಕೃಷ್ಣ ಅಡಿಗ, ಶ್ರೀ ಬಾಳಪ್ಪ ಹುಕ್ಕೇರಿ, ಶ್ರೀ ಹೊನ್ನಪ್ಪ ಭಾಗವತಾರ್ ಹಾಗೂ ಕೇಂದ್ರದ ಮಾಜಿ ಸಚಿವ ಶ್ರೀ ಝಡ್.ಆರ್ ಅನ್ಸಾರಿಯವರ ನಿಧನದ ಸುದ್ದಿಯನ್ನು ಈ ಸದನಕ್ಕೆ ತಿಳಿಸಲು ವಿಷಾಧಿಸುತ್ತೇನೆ.

1. ಭಾರತದ ಮಾಜಿ ಉಪ ರಾಷ್ಟ್ರಪತಿ, ಸರ್ವೋಚ್ಚ ನ್ಯಾಯಾಲಯದ ಮುಖ್ಯ ನ್ಯಾಯಾಧೀಶ, ಗಾಂಧಿವಾದಿ, ಶಿಕ್ಷಣ ತಜ್ಞ ಡಾ. ಹಿದಾಯತ್ತುಲ್ಲಾ ಅವರು ಸಪ್ಟೆಂಬರ್ 18ರಂದು ನಿಧನ ಹೊಂದಿದರ್ರು.

1942ರಲ್ಲಿ ಅತ್ಯಂತ ಕಿರಿಯ ವಯಸ್ಸಿನಲ್ಲಿಯೇ ವಕೀಲರಾಗಿ ಸಾರ್ವಜನಿಕ ರಂಗವನ್ನು ಪ್ರವೇಶಿಸಿದ ಹಿದಾಯತುಲ್ಲಾ ಅವರು 1954ರಿಂದ 1956ರವರೆಗೆ ನಾಗಪುರ ಉಚ್ಚ ನ್ಯಾಯಾಲಯದ ಮುಖ್ಯ ನ್ಯಾಯಾಧೀಶರಾಗಿ, 1958ರಿಂದ 1968ರವರೆಗೆ ಸರ್ವೋಚ್ಚ ನ್ಯಾಯಾಲಯದ ನ್ಯಾಯಾಧೀಶರಾಗಿ, 1968ರಿಂದ 1970ರವರೆಗೆ ರಾಷ್ಟ್ರದ ಮುಖ್ಯ ನ್ಯಾಯಾಧೀಶರಾಗಿ, 1969ರಲ್ಲಿ ಹಂಗಾಮಿ ರಾಷ್ಟ್ರಾಧ್ಯಕ್ಷರಾಗಿ, 1979ರಿಂದ 1984ರವರೆಗೆ ಉಪ ರಾಷ್ಟ್ರಪತಿಗಳಾಗಿ ರಾಷ್ಟ್ರಕ್ಕೆ ಅತ್ಯಮೋಘ ಸೇವೆ ಸಲ್ಲಿಸಿದರು. ಅಳವಾದ ಪಾಂಡಿತ್ಯಕ್ಕೆ ಮತ್ತೊಂದು ಹೆಸರಾಗಿದ್ದ ಅವರು ಶಿಕ್ಷಣ ತಜ್ಞರೂ ಆಗಿದ್ದರು. ಹಲವಾರು ವಿಶಿಷ್ಟತೆಗಳನ್ನು ತಮ್ಮದಾಗಿಸಿಕೊಂಡು ರಾಷ್ಟ್ರೀಯ ಜೀವನದಲ್ಲಿ ಪ್ರಮುಖ ಪಾತ್ರ ವಹಿಸಿದ್ದ ಈ ಮಹಾ ಮಾನವತಾವಾದಿ ಭಾರತೀಯ ರೆಡ್‌ಕ್ರಾಸ್ ಸೊಸೈಟಿ, ಅಂತರರಾಷ್ಟ್ರೀಯ ಕಾನೂನು ಸಂಘ, ಭಾರತೀಯ ವಿದ್ಯಾ ಭವನದಂತಹ ಹಲವು ಅನೇಕ ಸಂಘಸಂಸ್ಥೆಗಳೊಂದಿಗೆ ನಿಕಟ ಸಂಪರ್ಕ ಹೊಂದಿದ್ದರು. ಸಮಾಜದ ಸರ್ವತೋಮುಖ ಅಭಿವೃದ್ಧಿ ಹಾಗೂ ಕೋಮು ಹಿಂಸಾಚಾರದಂತಹ ಸಾಮಾಜಿಕ ಅನಿಷ್ಟಗಳ ವಿರುದ್ಧ ಹೋರಾಟಕ್ಕಾಗಿ ತಮ್ಮ ಇಡೀ ಜೀವಸವನ್ನೇ ಮುಡುಪಾಗಿಟ್ಟಿದ್ದ ಮಹಾ ಮೇಧಾವಿ ಹಾಗೂ ರಾಜಕೀಯ ಮುತ್ಸದ್ದಿಯಾಗಿದ್ದರು.

2. ಗಾಂಧಿವಾದದಿಗಳೂ ವಿಧಾನಪರಿಷತ್ತಿನ ಹಾಲಿ ಸದಸ್ಯರೂ ಆಗಿದ್ದ ಶ್ರೀ ಎಂ. ವಿವೇಕಾನಂದಯ್ಯ ಅವರು ಅಕ್ಟೋಬರ್ 28ರಂದು ನಿಧನರಾದರು. ವಿಧಾನ ಸಭೆಯಿಂದ ವಿಧಾನ ಪರಿಷತ್ತಿಗೆ 1988ರಲ್ಲಿ ಆಯ್ಕೆಯಾಗಿ ಸೇವೆ ಸಲ್ಲಿಸುತ್ತಿದ್ದ ಶ್ರೀಯುತರು ಚಿತ್ರದುರ್ಗ ತಾಲ್ಲೂಕು ಅಭಿವೃದ್ಧಿ ಮಂಡಳಿಯ ಸದಸ್ಯರಾಗಿ, ಪ್ರಾಥಮಿಕ ಭೂ ಅಭಿವೃದ್ಧಿ ಬ್ಯಾಂಕಿನ ಅಧ್ಯಕ್ಷರಾಗಿ, ಶ್ರೀ ಸಿದ್ಧವನಹಳ್ಳಿ ನಿಜಲಿಂಗಪ್ಪ ಟ್ರಸ್ಟಿನ ಅಧ್ಯಕ್ಷರಾಗಿ ಸೇವೆ ಸಲ್ಲಿಸಿರುವುದರ ಜೊತೆಗೆ ಸಮಾಜದ ಸರ್ವತೋಮುಖ ಅಭಿವೃದ್ಧಿಗಾಗಿ ಶ್ರಮಿಸಿದ ಕೀರ್ತಿ ಶ್ರೀಯುತರದು.

3. ಮೈಸೂರು ಸಂವಿಧಾನ ಸಭೆ ಹಾಗೂ ವಿಧಾನ ಸಭೆಯ ಮಾಜಿ ಸದಸ್ಯರಾಗಿದ್ದ ಶ್ರೀ ಡಿ.ಎಂ. ಸಿದ್ದಯ್ಯನವರು ಸಪ್ಟೆಂಬರ್ 8ರಂದು ನಿಧನರಾದರು. ವೃತ್ತಿಯಲ್ಲಿ ಕೃಷಿಕರಾಗಿದ್ದ ಶ್ರೀ ಸಿದ್ದಯ್ಯನವರು 1942ರಲ್ಲಿ ಬ್ರಿಟೀಷರ ವಿರುದ್ಧ 'ಭಾರತ ಬಿಟ್ಟು ತೊಲಗಿರಿ' ಚಳುವಳಿಯಲ್ಲಿ ಸಕ್ರಿಯ ಪಾತ್ರ ವಹಿಸಿದ್ದವರು. ಮೂರು ಮತ್ತು ನಾಲ್ಕನೇ ವಿಧಾನಸಭೆಗೆ ನಂಜನಗೂಡು ಕ್ಷೇತ್ರವನ್ನು ಪ್ರತಿನಿಧಿಸಿ ಮಹತ್ತರ ಸೇವೆ ಸಲ್ಲಿಸಿರುವುದರ ಜೊತೆಗೆ ಸಂಸದೀಯ ಪಟುವಾಗಿ, ಕೃಷಿ ಕೈಗಾರಿಕಾ ಅಭಿವೃದ್ಧಿ ನಿಗಮ ಹಾಗೂ ಅರಣ್ಯ ಅಭಿವೃದ್ಧಿನಿಗಮದ ಅಧ್ಯಕ್ಷರಾಗಿ, ಸಮಾಜ ಕಾರ್ಯಕರ್ತರಾಗಿ ಹಾಗೂ ಹರಿಜನರ ಶ್ರೇಯೋಭಿವೃದ್ಧಿಗಾಗಿ ಸತತವಾಗಿ ಶ್ರಮಿಸಿದ್ದ ಕೀರ್ತಿ ಶ್ರೀಯುತರದು.

4. ಹಿರಿಯ ಸ್ವಾತಂತ್ರ್ಯ ಹೋರಾಟಗಾರ ಹಾಗೂ ವಿಧಾನ ಸಭೆಯ ಮಾಜಿ ಸದಸ್ಯ ಶ್ರೀ ಕೆ.ಪಿ. ರೇವಣ್ಣ ಸಿದ್ದಪ್ಪನವರು ಸಪ್ಟೆಂಬರ್ 7ರಂದು ನಿಧನ ಹೊಂದಿದರು.

ತಿಪಟೂರು ಕ್ಷೇತ್ರದಿಂದ ಎರಡನೇ ಹಾಗೂ ಮೂರನೇ ವಿಧಾನಸಭೆಗೆ ಪ್ರಜಾ ಸಮಾಜವಾದಿ ಪಕ್ಷದಿಂದ ಆಯ್ಕೆಯಾಗಿದ್ದ ಶ್ರೀಯುತರು ತಿಪಟೂರು ರೆಗ್ಯೂಲೇಟೆಡ್ ಸಮಿತಿ, ಪರಿಶಿಷ್ಟ ಹಾಗೂ ಕೋಳಿ ಸಾಕಾಣಿಕಾ ಸಮಿತಿಗಳೂಕಪಹ ಅನೇಕ ಸಂಘ ಸಂಸ್ಥೆಗಳ ಸದಸ್ಯರಾಗಿ ಸೇವೆ ಸಲ್ಲಿಸಿರುವುದರ ಜೊತೆಗೆ ದೀನ ದಲಿತರು ಹಾಗೂ ಸಾಮಾಜಿಕವಾಗಿ ಹಿಂಳಿತಕ್ಕೊಳಗಾದ ಬಡ ಜನರ ಪುರೋಭಿವೃದ್ಧಿಗಾಗಿ ತಮ್ಮ ಜೀವನವನ್ನೇ ಸವೆಸಿದ ಕೀರ್ತಿ ಶ್ರೀಯುತರದು .

5. ವಿಧಾನ ಸಭೆಯ ಮಾಜಿ ಸದಸ್ಯ ಶ್ರೀ ವಿ.ಎಸ್. ಲಕ್ಷ್ಮಿಕಾಂತಪ್ಪನವರು ನವೆಂಬರ್ 16 ರಂದು ನಿಧನರಾದರು.

ವೃತ್ತಿಯಲ್ಲಿ ಕೃಷಿಕರು ಹಾಗೂ ವಾಣಿಜ್ಯೋದ್ಯಮಿಗಳೂ ಆಗಿದ್ದ ಶ್ರೀ ಲಕ್ಷ್ಮಿಕಾಂತಪ್ಪನವರು ಮೂರನೇ ವಿಧಾನ ಸಭೆಗೆ ಸಾಗರ ಕ್ಷೇತ್ರವನ್ನು ಪ್ರತಿನಿಧಿಸಿ ಗಣನೀಯ ಸೇವೆ ಸಲ್ಲಿಸಿದ್ದರು. ಸಾಗರದ ಗ್ರಾಮೀಣ ಕೈಗಾರಿಕಾ ಸಹಕಾರ ಸಂಘದ ಅಧ್ಯಕ್ಷರಾಗಿ, ಜಿಲ್ಲಾ ಅಡಿಕೆ ಬೆಳೆಗಾರರ ಮಾರಾಟ ಸಮಿತಿಯ ಸದಸ್ಯರಲ್ಲದೇ ಇನ್ನೂ ಅನೇಕ ಸಹಕಾರ ಸಂಘ ಸಂಸ್ಥೆಗಳಲ್ಲಿ ಸಕ್ರೀಯವಾಗಿ ಭಾಗವಹಿಸಿ ತಾಲ್ಲೂಕಿನ ಹಾಗೂ ಸಮಾಜದ ಅಭಿವೃದ್ಧಿಗಾಗಿ ಶ್ರೀಯುತರು ಶ್ರಮಿಸಿದ್ದಾರೆ.

6. ಹಿರಿಯ ಸ್ವಾತಂತ್ರ್ಯ ಹೋರಾಟಗಾರ ಹಾಗೂ ವಿಧಾನ ಸಭೆಯ ಮಾಜಿ ಸದಸ್ಯ ಡಾ; ಬಿ. ಬಾಲಕೃಷ್ಣ ಶೆಟ್ಟಿಯವರು ನವೆಂಬರ್ 17ರಂದು ನಿಧನ ಹೊಂದಿದರು.

1942ರ 'ಭಾರತ ಬಿಟ್ಟು ತೊಲಗಿ' ಚಳಿವಳಿಯಲ್ಲಿ ಸಕ್ರೀಯ ಪಾತ್ರ ವಹಿಸಿದ್ದ ಡಾ; ಬಿ.ಬಿ. ಶೆಟ್ಟಿಯವರು ವೃತ್ತಿಯಲ್ಲಿ ವೈದ್ಯರಾಗಿದ್ದು 7ನೇ ವಿಧಾನ ಸಭೆಗೆ ಬ್ರಹ್ಮಾವರ ಕ್ಷೇತ್ರದಿಂದ ಆಯ್ಕೆಯಾಗಿ ಸೇವೆ ಸಲ್ಲಿಸಿದ್ದರು. ನಾಟಕ, ಕ್ರೀಡೆ, ಸಾಂಸ್ಕೃತಿಕ ಚಟುವಟಿಕೆಗಳಲ್ಲದೆ ಅನೇಕ ವಿದ್ಯಾ ಸಂಸ್ಥೆಗಳ ಸ್ಥಾಪಕರಾಗಿ, ಸಾಮಾಜಿಕ ಪ್ರಗತಿಗಾಗಿ ದುಡಿದವರು.

7. ವಿಧಾನ ಸಭೆಯ ಮಾಜಿ ಸದಸ್ಯ ಶ್ರೀ ಸಿ.ಎಂ. ಆರ್ಯುಗೌ ಅವರು ಡಿಸೆಂಬಕ್ 14ರಂದು ನಿಧನ ಹೊಂದಿದರು.

ಸಂಸದೀಯ ಪಟು ಹಾಗೂ ರಿಪಬ್ಲಿಕನ್ ಪಕ್ಷದ ಪ್ರಧಾನ ಕಾರ್ಯದರ್ಶಿಗಳಾಗಿದ್ದ ಶ್ರೀ ಆರ್ಯುಗೌ ಅವರು ಎರಡು, ನಾಲ್ಕು ಮತ್ತು ಆರನೇ ವಿಧಾನ ಸಭೆಗೆ ಕೆ.ಜೆ.ಎಪ್. ಕ್ಷೇತ್ರದಿಂದ ಆಯ್ಕೆಯಾಗಿ ಸೇವೆ ಸಲ್ಲಿಸಿದ್ದಾರೆ. ಶ್ರೀಯುತರು ಅಂಬೇಡ್ಕರ್ ವಿಚಾರಧಾರೆಯಿಂದ ಪ್ರಭಾವಿತರಾಗಿ ದೀನ ದಲಿತರು ಹಾಗೂ ಶೋಷಿತ ಜನಾಂಗದ ಹಕ್ಕುಗಳಿಗಾಗಿ ಹೋರಾಟ ಮಾಡಿ, ಸಮಾಜದ ಅನೇಕ ಸಂಘ ಸಂಸ್ಥೆಗಳೊಂದಿಗೆ ನಿಕಟ ಸಂಪರ್ಕವನ್ನಿಟ್ಟುಕೊಂಡಿದ್ದರು. ಡಾ; ಅಂಬೇಡ್ಕರ್ ಮಡಿಕಲ್ ಕಾಲೇಜಿನ ಸ್ಥಾಪಕರಲ್ಲೊಬ್ಬರಾಗಿ, ಕೆ.ಜೆ.ಎಫ್.ನ ಅಂಬೇಡ್ಕರ್ ಭವನ ಹಾಗೂ ವಿಧಾನ ಸೌಧದ ಮುಂಭಾಗದ ಅಂಬೇಡ್ಕರ್ ಪ್ರತಿಮೆ ಸ್ಥಾಪನೆಗೆ ಕಾರಣಕರ್ತರಾಗಿ, ಕೆ.ಜೆ.ಎಫ್.ನ ಚಿನ್ನದ ಗಣಿ ಸೌಕರರ ಸಂಘದ ಅಧ್ಯಕ್ಷರಾಗಿ, ಬೆಂಗಳೂರು ವಿಶ್ವವಿದ್ಯಾನಿಲಯ ಸೆನೆಟ್ ಹಾಗೂ ಮೈಸೂರು ರಾಜ್ಯದ ಹರಿಜನ ಫೆಡರೇಷನ್‌ನ ಕಾರ್ಯದರ್ಶಿಯಾಗಿ ಸಮಾಜದ ಸರ್ವತೋಮುಖ ಅಭಿವೃದ್ಧಿಗಾಗಿ ಅವಿರತವಾಗಿ ಸೇವೆ ಸಲ್ಲಿಸಿದ ಕೀರ್ತಿ ಶ್ರೀಯುತರದು.

8. ಹಿರಿಯ ಸ್ವಾತಂತ್ರ್ಯ ಹೋರಾಟಗಾರ, ಪ್ರಜಾಪ್ರತಿನಿಧಿ ಸಭೆ ಹಾಗೂ ವಿಧಾನಸಭೆಯ ಮಾಜಿ ಸದಸ್ಯರಾದ ಶ್ರೀ ಡಿ.ಆರ್. ಕರೀಗೌಡ ಅವರು ಡಿಸೆಂಬರ್ 18ರಂದು ನಿಧನರಾದರು.

1941 ಹಾಗೂ 1945ರಲ್ಲಿ ಎರಡು ಸಾರಿ ಪ್ರಜಾಪ್ರತಿನಿಧಿ ಸಭೆಗೂ, 1952ರಲ್ಲಿ ವಿಧಾನ ಸಭೆಗೂ ಹಾಸನ ಕ್ಷೇತ್ರದಿಂದ ಆಯ್ಕೆಯಾಗಿ ಬಹುಕಾಲ ನೆನಪಿನಲ್ಲುಳಿಯುವಂತಹ ಸೇವೆ ಸಲ್ಲಿಸಿದ್ದ ಶ್ರೀ ಕರೀಗೌಡರು ಸ್ವಾತಂತ್ರ್ಯ ಹೋರಾಟಗಾರರಾಗಿ, ಅನೇಕ ಶಿಕ್ಷಣ ಸಂಸ್ಥೆಗಳ ಸ್ಥಾಪಕರಾಗಿ, ಅಧ್ಯಕ್ಷರಾಗಿ, ಹಾಸನ ನಗರ ಸಭಾ ಸದಸ್ಯರಾಗಿ, ಮಲೆನಾಡು ತಾಂತ್ರಿಕ ಶಿಕ್ಷಣ ಸಂಸ್ಥೆಯ ಉಪಾಧ್ಯಕ್ಷರಾಗಿ, ಸಮಾಜದ ಏಳಿಗೆಗಾಗಿ ಅವಿರತವಾಗಿ ಶ್ರಮಿಸಿದ ಶ್ರೀಯುತರು ಗ್ರಾಮೀಣ ಜನತೆಯ ಬಗ್ಗೆ ಅತ್ಯಂತ ಕಾಳಜಿಯುಳ್ಳವರಾಗಿದ್ದರು.

9. ಸಂಗೀತ ಲೋಕದ ದಿಗ್ಗಜ, ಖ್ಯಾತ ಹಿಂದೂಸ್ಥಾನಿ ಗಾಯಕ, ವಿಧಾನ ಪರಿಷತ್ತಿನ ಮಾಜಿ ಸದಸ್ಯರಾಗಿದ್ದ ಪದ್ಮಭೂಷಣ ಪಂಡಿತ್ ಮಲ್ಲಿಕಾರ್ಜುನ ಮನ್ಸೂರರು ಸಪ್ಟೆಂಬರ್ 12 ರಂದು ಶಿವೈಕ್ಯರಾದರು.

1910ರಲ್ಲಿ ಧಾರವಾಡ ತಾಲ್ಲೂಕಿನ ಮನಸೂರ್ ಗ್ರಾಮದ ಬಡ ಕುಟುಂಬದಲ್ಲಿ ಜನಿಸಿದ ಸ್ವಾಭಿಮಾನಿ ಮನ್ಸೂರರು ಸಿತಸಕ್ಕೆ ಮಾರು ಹೋಗದೆ ಸಂಗೀತಕ್ಕೆ ತಮ್ಮನ್ನು ಸಂಪೂರ್ಣವಾಗಿ ಸಮರ್ಪಿಸಿಕೊಂಡು ತಮ್ಮ ಅವಿರತ ಸಾಧನೆಯಿಂದ ಅಂತರರಾಷ್ಟ್ರೀಯ ಖ್ಯಾತಿ ಗಳಿಸಿದವರು.

ಪದ್ಮಶ್ರೀ, ಪದ್ಮಭೂಷಣ ಪ್ರಶಸ್ತಿಗಳನ್ನು ಪಡೆದಿದ್ದ ಮನ್ಸೂರರಿಗೆ ಮಧ್ಯಪ್ರದೇಶ ಸರ್ಕಾರ 1981ರಲ್ಲಿ "ಕಾಳಿದಾಸ ಸನ್ಮಾನ"ವನ್ನು ನೀಡಿ ಗೌರವಿಸಿತ್ತು. ರಾಜ್ಯ ಹಾಗೂ ಕೇಂದ್ರ ಸಂಗೀತ ನಾಟಕ ಅಕಾಡಮಿಗಳೂ ಪ್ರಶಸ್ತಿ ನೀಡಿ ಗೌರವಿಸಿದ್ದವು. 1987ರಲ್ಲಿ ಕೇಂದ್ರ ಸಂಗೀತ ನಾಟಕ ಅಕಾಡಮಿಯ ಫೆಲೋಶಿಪ್, ಕರ್ನಾಟಕ ಮತ್ತು ಕಲ್ಯಾಣಿ ವಿಶ್ವವಿದ್ಯಾಲಯಗಳಿಂದ ಡಿ.ಲಿಟ್, ವಿಶ್ವಭಾರತಿ ವಿಶ್ವವಿದ್ಯಾಲಯದಿಂದ 'ದೇಶಿಕೋತ್ತಮ ಪ್ರಶಸ್ತಿ' ಪಡೆದ ಮನ್ಸೂರರು ನಾಟಕಕಾರರಾಗಿ, ಸಂಗೀತ ನಿರ್ದೇಶಕರಾಗಿ, ನಟರಾಗಿ, ಮರೆಯಲಾಗದ ಸೇವೆ ಸಲ್ಲಿಸಿದುದೇ ಅಲ್ಲದೆ ಧಾರವಾಡ, ಪುಣೆ, ಹೈದರಾಬಾದ್ ಹಾಗೂ ಬೆಂಗಳೂರು ಆಕಾಶವಾಣಿಯಲ್ಲಿ ಸಂಗೀತ ಸಲಹೆಗಾರರಾಗಿ ಸೇವೆ ಸಲ್ಲಿಸಿ 1984ರಿಂದ 1990ರವರೆಗೆ ವಿಧಾನ ಪರಿಷತ್ತಿನ ಸದಸ್ಯರಾಗಿಯೂ ಸಹ ಸೇವೆ ಸಲ್ಲಿಸಿದ ಮಹಾನ್ ವ್ಯಕ್ತಿ.

10. ಕರ್ನಾಟಕ ಸಂಗೀತದ ವಿಖ್ಯಾತ ವಿದ್ವಾಂಸ ಮಹಾರಾಜಪುರಂ ಸಂತಾನಂ ಅವರು ದಿನಾಂಕ ಜೂನ್ 24ರಂದು ನಿಧನರಾದರು.

ಶ್ರೀ ಸಂತಾನಂ ಅವರು ಕರ್ನಾಟಕ ಸಂಗೀತ ಪ್ರಪಂಚದ ದಿಗ್ಗಜಗಳಲ್ಲೊಬ್ಬರಾಗಿದ್ದವರು. ಶೋತ್ರಗಳ ಹೃನ್ಮನಗಳನ್ನು ಗೆದ್ದು ಶುದ್ಧ ಶಾಸ್ತ್ರೀಯ ಸಂಗೀತಕ್ಕೆ ಮತ್ತೊಂದು ಹೆಸರೇ ಆಗಿದ್ದ ಅವರಿಗೆ 1990ರಲ್ಲಿ ಪದ್ಮಶ್ರೀ ಪ್ರಶಸ್ತಿ ನೀಡಿ ಗೌರವಿಸಲಾಗಿತ್ತು. ದೇಶ ವಿದೇಶಗಳಲ್ಲಿ ಸಂಚರಿಸಿ ಕರ್ನಾಟಕ ಸಂಗೀತ ಸುಧೆಯನ್ನು ಹರಿಸಿದ್ದ ಇವರನ್ನು ಲಂಡನಿನ ಮಿಕ್ಕಂದರ್ ಅಧೀನದ ಸಂಸ್ಥೆ "ಸಂಗೀತ ಭೂಪತಿ ಮತ್ತು ಸಂಗೀತ ಕಲಾನಿಧಿ" ಬಿರುದು ನೀಡಿ ಗೌರವಿಸಿತ್ತು. ತಿರುಪತಿ ತಿರುಪತಿ ದೇವಸ್ಥಾನ ಮತ್ತು ಕಂಚಿ ಕಾಮಕೋಟಿ ಮಠದ ಆಸ್ಥಾನ ವಿದ್ವಾನ್‌ರಾಗಿದ್ದ ಸಂತಾನಂ ಅವರು ಶೃಂಗೇರಿ ಮಹಾಧೀಶರಿಂದ ಗಾನ ಕಲಾನಿಧಿ, ಮತ್ತು ಕಂಚಿ ಮಠದ ಮಹಾಧಿಶರಿಂದ "ಸಂಗೀತ ಸಾಗರಾಮೃತ ವರ್ಷಿ" ಎಂಬ ಬಿರುದುಗಳನ್ನು ಪಡೆದಿದ್ದರು. ಇಂತಹ ಮಹಾನ್ ಸಾಧಕ ಅಕಾಲ ಮರಣಕ್ಕೀಡಾದುದು ಒಂದು ದುರಂತ.

11. ಹಿರಿಯ ಗಾಂಧಿವಾದಿ, ಚಿಂತಕ, ಸಮಾಜವಾದಿ ಆಂದೋಲನ ನೇತಾರ ಶ್ರೀ ಅಚ್ಯುತ್ ಪಟವರ್ಧನ್ ಅವರು ಆಗಸ್ಟ್ 5 ರಂದು ವಿಧಿವಶರಾದರು.

ಅಜನ್ಮ ಬ್ರಹ್ಮಚಾರಿಗಳಾಗಿದ್ದ ಶ್ರೀ. ಪಟವರ್ಧನ್ ಅವರು ಬನಾರಸ್ ಸೆಂಟ್ರಲ್ ಹಿಂದೂ ಕಾಲೇಜಿನಲ್ಲಿ ಅರ್ಥಶಾಸ್ತ್ರದಲ್ಲಿ ಸ್ನಾತಕೋತ್ತರ ಪದವಿ ಗಳಿಸಿ 1932ರ ವರೆಗೆ ಅದೇ ಕಾಲೇಜಿನಲ್ಲಿ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿ ನಂತರ ಗಾಂಧೀಜಿ ಅವರ ಸೆಳೆತಕ್ಕೆ ಸಿಕ್ಕಿ ಅಸಹಕಾರ ಚಳುವಳಿಗೆ ದುಮುಕಿ ಹಲವಾರು ಬಾರಿ ಸೆರೆವಾಸ ಅನುಭವಿಸಿದ್ದರು. ಮಹಾನ್ ದೇಶ ಪ್ರೇಮಿಗಳಾಗಿದ್ದ ಅವರು

ಸಕ್ರಿಯ ರಾಜಕಾರಣಕ್ಕಿಂತ ರಚನಾತ್ಮಕ ಕಾರ್ಯವೇ ಶ್ರೇಷ್ಠವೆಂದು ಭಾವಿಸಿದ್ದವರು. ಗಾಂಧಿ ಹಾಗೂ ಜಯಪ್ರಕಾಶ್ ನಾರಾಯಣರವರ ಕಟ್ಟಾ ಅನುಯಾಯಿಗಳಾಗಿದ್ದ ಅವರದು ಸರಳ ನಿರಾಡಂಬ ವ್ಯಕ್ತಿತ್ವ.

12. ಹಿರಿಯ ಸ್ವಾತಂತ್ರ್ಯ ಹೋರಾಟಗಾರ ಶ್ರೀ ಕೆ.ಎಸ್ ಪಾಟೇಲ್ ಅವರು ಆಗಸ್ಟ್ 10ರಂದು ನಿಧನ ಹೊಂದಿದರು.

1951ರಲ್ಲಿ ಸವದತ್ತಿ ವಿಧಾನ ಸಭಾ ಕ್ಷೇತ್ರದಿಂದ ಮುಂಬೈ ವಿಧಾನ ಸಭೆಗೆ ಆಯ್ಕೆಯಾಗಿ ಸೇವೆ ಸಲ್ಲಿಸಿದ್ದ ಶ್ರೀಯುತರು ಅಖಿಲ ಭಾರತ ಹತ್ತಿ ಒಕ್ಕೂಟದ ಅಧ್ಯಕ್ಷರಾಗಿದ್ದರು. ಕೃಷಿಕರ ಬಗ್ಗೆ ತೀವ್ರ ಕಾಳಜಿ ಹೊಂದಿದ್ದ ಶ್ರೀಯುತರು ಅವರ ಏಳಿಗೆಗಾಗಿ ನಿರಂತರ ದುಡಿದವರು.

13. ಹೊಸಗನ್ನಡ ಕಾವ್ಯದ ಮಾರ್ಗ ಪ್ರವರ್ತಕ, ಶ್ರೇಷ್ಠ ಕವಿ. ಪ್ರೊ. ಮಾಗೇರಿ ಗೋಪಾಲಕೃಷ್ಣ ಅಡಿಗರು ನವೆಂಬರ್ 4ರಂದು ನಿಧನ ಹೊಂದಿದರು.

ನವೋದಯ ಮಾರ್ಗದಲ್ಲಿ ಕಾವ್ಯರಚನೆ ಆರಂಭಮಾಡಿ ಕನ್ನಡ ಕಾವ್ಯಕ್ಕೆ ಹೊಸ ಆಯಾಮವನ್ನೇ ನೀಡಿ, ಸಮಾಜದ ಕಣ್ಣು ತೆರೆಸಿದ ಕವಿ ಎಂಬ ಪ್ರಶಂಸೆಗೆ ಪಾತ್ರರಾದ ಅಡಿಗರು ಪ್ರಾಂಶುಪಾಲರಾಗಿ, ಮಿಮರ್ಶಕರಾಗಿ, ಕವಿಯಾಗಿ ಅನೇಕ ಕವನ ಸಂಕಲನಗಳನ್ನು ಕನ್ನಡ ಸಾರಸ್ವತ ಭಂಡಾರಕ್ಕೆ ನೀಡಿದ್ದಾರೆ. ಕೇರಳದ ಕುಮಾರನ್ ಆಸಾನ್ ಪ್ರಶಸ್ತಿ, ಮಧ್ಯಪ್ರದೇಶ ಸರ್ಕಾರದ ಕಾಳಿದಾಸ ಸನ್ಮಾನ್, ರಾಜ್ಯ ಮತ್ತು ಕೇಂದ್ರ ಸಾಹಿತ್ಯ ಅಕಾಡೆಮಿಗಳ ಪ್ರಶಸ್ತಿಗಳಿಗೆ ಪಾತ್ರರಾಗಿದ್ದ ಅಡಿಗರು ರನ್ನಡ ನಾಡಿನ ಸಾರಸ್ವತ ಲೋಕದಲ್ಲಿ ಒಂದು ವಿಶಿಷ್ಟ ಪರಂಪರೆಯನ್ನೇ ಸೃಷ್ಟಿಸಿದವರು.

14. ಸ್ವಾತಂತ್ರ್ಯ ಹೋರಾಟಗಾರ, ಸಾವಿರ ಹಾಡುಗಳ ಸರದಾರ ಶ್ರೀ ಬಾಳಪ್ಪ ಹುಕ್ಕೇರಿ ಅವರು ನವೆಂಬರ್ 15 ರಂದು ನಿಧನ ಹೊಂದಿದರು.

ಸ್ವಾತಂತ್ರ್ಯ ಹೋರಾಟದಲ್ಲಿ ಸಕ್ರಿಯವಾಗಿ ಭಾಗವಹಿಸಿ ತಮ್ಮ ಕಂಚಿನ ಕಂಠದಿಂದ ಗಂಟೆಗಟ್ಟಲೆ ದೇಶಭಕ್ತಿಗೀತೆಗಳನ್ನು ಹಾಡಿ ಜನರಲ್ಲಿ ಸ್ವಾತಂತ್ರ್ಯದ ಹಂಬಲ ಹರಳು ಗಟ್ಟುವಂತೆ ಮಾಡುತ್ತಿದ್ದವರು ಶ್ರೀ ಬಾಳಪ್ಪ ಹುಕ್ಕೇರಿಯವರು. ಆರು ತಿಂಗಳ ಸೆರೆವಾಸವನ್ನೂ ಅನುಭವಿಸಿದ ಈ ಧೀಮಂತ ವ್ಯಕ್ತಿಗೆ ಕರ್ನಾಟಕ ಸಂಗೀತ ನಾಟಕ ಅಕಾಡೆಮಿ ಹಾಗೂ ಕೇಂದ್ರ ಸಂಗೀತ ಅಕಾಡೆಮಿಗಳ ಪ್ರಶಸ್ತಿಗಳಲ್ಲದೆ 'ಜಾನಪದ ರತ್ನ' ಜಾನಪದ ಆಚಾರ್ಯ ಮುಂತಾದ ಬಿರುದುಗಳನ್ನು ನೀಡಿ ಗೌರವಿಸಲಾಗಿತ್ತು. ತುಂಬು ಜೀವನ ನಡೆಸಿದ ಸಾರ್ಥಕ ಈ ಜೀವಿ ಕನ್ನಡ ಕಾವ್ಯಗಳನ್ನು ಅತ್ಯಂತ ಭಾವಪೂರ್ಣವಾಗಿ ಹಾಡಿ ಜನಕೋಟಿಯನ್ನು ತಣಿಸಿದ ಸದ್ಗುಣಿ ಕಲಾವಿದ.

15. ಹಿರಿಯ ಕಲಾವಿದ ಹಾಗೂ ಸಂಗೀತಗಾರ ಶ್ರೀ ಹೊನ್ನಪ್ಪ ಭಾಗವತರು ಅಕ್ಟೋಬರ್ 21ರಂದು ನಿಧನ ಹೊಂದಿದರು.

ಸಂಗೀತಗಾರರಾಗಿ ತಮ್ಮ ವ್ಯಕ್ತಿ ಜೀವನವನ್ನಾರಂಭಿಸಿದ ಶ್ರೀ ಹೊನ್ನಪ್ಪ ಭಾಗವತರು ರಂಗಭೂಮಿ ಮತ್ತು ಚಲನಚಿತ್ರ ಕ್ಷೇತ್ರಗಳಲ್ಲಿಯೂ ಅತ್ಯಂತ ಯಶಸ್ವಿಯಾಗಿ ಮಿಂಚಿದ ಕಲಾವಿದರಾದರು. 300ಕ್ಕೂ ಹೆಚ್ಚು ಸಂಗೀತ ಕೃತಿಗಳನ್ನು ರಚಿಸಿ, ಓಂಕಾರನಾಥ ಸುಧಾ, ಹಿತಪ್ರಿಯ, ಸೋತ್ರ ಪ್ರಿಯ, ರತ್ನಕ್ಷಾಂತಿ ಮುಂತಾದ ರಾಗಗಳನ್ನು ಸಂಗೀತ ಪ್ರಪಂಚಕ್ಕೆ ನೀಡಿದ್ದುದಲ್ಲದೆ ಕರ್ನಾಟಕದ ಅದ್ವಿತೀಯ ಸಂಗೀತ ವಿದ್ವಾಂಸರಾಗಿ, ನಟರಾಗಿ, ನಿರ್ಮಾಪಕರಾಗಿ, ವಾಗ್ಮೇಯರಾಗಿ ಅನೇಕ ಕನ್ನಡ ಚಿತ್ರಗಳನ್ನು ನಾಡಿಗೆ ಅರ್ಪಿಸಿ ಸಂಗೀತ, ನಾಟಕ, ನೃತ್ಯ, ಅಕಾಡೆಮಿ ಹಾಗೂ ಕೇಂದ್ರ ಸಂಗೀತ ನಾಟಕ ಅಕಾಡೆಮಿ ಪ್ರಶಸ್ತಿಗಳನ್ನು ಪಡೆದ ಕೀರ್ತಿ ಶ್ರೀಯುತರದು. ಇದೇ ಅಲ್ಲದೆ ಅನೇಕ ಸಂಘ ಸಂಸ್ಥೆಗಳು ಗಾನಕಲಾ ಗಂಧರ್ವ, ಗಾಯಕ ಶಿಖಾಮಣಿ, ನಾದ ಮಹರ್ಷಿ, ಗಾನಕಲಾ ಭೂಷಣ, ಗಾನಾಭಿನಯಚಂದ್ರ, ನಟವರ ಗಾನಗಂಧರ್ವ ಮೊದಲಾದ ಬಿರುದುಗಳನ್ನು ನೀಡಿ ಪುರಸ್ಕರಿಸಿದ್ದವು.

16. ಕೇಂದ್ರದ ಮಾಜಿ ಸಚಿವ ಶ್ರೀ ಝಡ್.ಆರ್. ಅನ್ಸಾರಿಯವರು ಅಕ್ಟೋಬರ್ 6 ರಂದು ನಿಧನರಾದರು.

ಉತ್ತರ ಪ್ರದೇಶದ ಬಡ ನೇಕಾರ ಕುಟುಂಬ ಒಂದರಲ್ಲಿ ಜನಿಸಿದ ಶ್ರೀ ಅನ್ಸಾರಿಯವರು ಸ್ವಸಾಮರ್ಥ್ಯದಿಂದ ರಾಷ್ಟ್ರ ಮಟ್ಟದ ನಾಯಕರಾದವರು. 1962 ರಿಂದ 1969 ರವರೆಗೆ ಉತ್ತರ ಪ್ರದೇಶ ವಿಧಾನ ಸಭಾ ಸದಸ್ಯರಾಗಿ, 1971, 1980, 1984ರ ಅವಧಿಗಳಲ್ಲಿ ಕೇಂದ್ರ ಮಂತ್ರಿಮಂಡಲದಲ್ಲಿ

ರಾಜ್ಯ ಸಚಿವರಾಗಿ, ಏಪ್ರಿಲ್ 1985 ರಲ್ಲಿ ಪರಿಸರ ಖಾತೆಯ ಕ್ಯಾಬಿನೆಟ್‌ದರ್ಜೆ ಸಚಿವರಾಗಿ ಸೇವೆ ಸಲ್ಲಿಸಿದ ಕೀರ್ತಿ ಶ್ರೀಯುತರದು--

ಈಗ ಮೃತರ ಗೌರವಾರ್ಥ ಮಾನ್ಯ ಸದಸ್ಯರುಗಳು ಒಂದು ನಿಮಿಷ ಎದ್ದು ನಿಂತು ಮೌನವನ್ನು ಆಚರಿಸಬೇಕೆಂದು ಕೇಳಿಕೊಳ್ಳುತ್ತೇನೆ.

(ಮೃತರ ಗೌರವಾರ್ಥ ಮಾನ್ಯ ಸದಸ್ಯರು ಒಂದು ನಿಮಿಷ ಎದ್ದು ನಿಂತು ಮೌನವನ್ನು ಆಚರಿಸಿದರು)

ಶ್ರೀ ಆರ್.ವಿ. ದೇಶಪಾಂಡೆ ;– ಶ್ರೀ ಎಸ್.ಡಿ. ಸುಂದರೇಶ್, ಧೃತ ಸಂಘದ ಮುಖಂಡರು ಮತ್ತು ಶ್ರೀ ಬಿ.ಎಲ್. ಪತ್ತಿ ಇವರು ಪತ್ರಕರ್ತರು, ಇವರಿಬ್ಬರೂ ನಿಧನ ಹೊಂದಿದ್ದಾರೆ. ಇವರಿಬ್ಬರನ್ನೂ ಇದರಲ್ಲಿ ಸೇರಿಸಬೇಕಾಗಿ ವಿನಂತಿಸುತ್ತೇನೆ.

ಉಪಾಧ್ಯಕ್ಷರಾದ ಶ್ರೀಯುತರು;– ಸೇರಿಸೋಣ.

ಉಪಾಧ್ಯಕ್ಷರಾದ ಶ್ರೀಯುತರು ;– ಮೃತ ಸದಸ್ಯರ ಕುಟುಂಬ ವರ್ಗದವರಿಗೆ ಈ ಸಭೆ ಅಂಗೀಕರಿಸಿದ ಸಂತಾಪ ಸೂಚಕ ಸಭೆಯ ನಿರ್ಣಯವನ್ನು ಕಳುಹಿಸಲಾಗುವುದು. ಸಭೆಯು ಈಗ ಮುಕ್ತಾಯವಾಗಿ ನಾಳೆ ಬೆಳಿಗ್ಗೆ 11–00 ಗಂಟೆಗೆ ಪುನಃ ಸಮಾವೇಶಗೊಳ್ಳುವುದು.

(ಸದನವು) 12–32 ಕ್ಕೆ ಮುಕ್ತಾಯಗೊಂಡು ಪುನಃ 29–12–92 ರಂದು ಬೆಳಿಗ್ಗೆ 11–00 ಗಂಟೆಗೆ ಸೇರಲು ನಿಶ್ಚಯಿಸಿತು)

(+ ಈ ಚಿಹ್ನೆ ಮಾನ್ಯ ಸದಸ್ಯರ ತಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.)